ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/01/ಇಎಪಿ/2017

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 31.03.2018

**ಜ್ಞಾಪನ**

ವಿಷಯ : ಹೈ-ಟೆಕ್ ಪಾಲಿಟೆಕ್ನಿಕ್, ಗೌರಿಬಿದನೂರು ಈ ಸಂಸ್ಥೆಯಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಬಿ.ಜಿ.ಎಸ್ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ ಈ ವಿದ್ಯಾಸಂಸ್ಥೆಯಲ್ಲಿ ಏಪ್ರಿಲ್/ಮೇ 2018 ರ ಪರೀಕ್ಷೆಯಿಂದ ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ಕಲ್ಪಿಸಿರುವ ಬಗ್ಗೆ.

ಉಲ್ಲೇಖ: ನಿರ್ದೇಶನಾಲಯದ ಟಿಪ್ಪಣಿ ಸಂಖ್ಯೆ: ಡಿಟಿಇ/505/ಎಸಿಎಂ(2)/2017-18, ದಿನಾಂಕ: 09.03.2018.

*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹೈ-ಟೆಕ್ ಪಾಲಿಟೆಕ್ನಿಕ್, ಗೌರಿಬಿದನೂರು ಈ ವಿದ್ಯಾಸಂಸ್ಥೆಯಲ್ಲಿ ತಲೆದೋರಿರುವ ಭಿನ್ನಾಭಿಪ್ರಾಯದಿಂದ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ 02, 04 ಮತ್ತು 06 ನೇ ಸೆಮಿಸ್ಟರ್‌ನ ರೆಗ್ಯೂಲರ್ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ತರಬೇತಿಯಲ್ಲಿ ಅನಾನುಕೂಲವಾಗಿರುವುದು ಹಾಗೂ ಉಪನ್ಯಾಸಕರ ಕೊರತೆಯಿರುವುದು ಉಲ್ಲೇಖದನ್ವಯ ಕಂಡುಬಂದಿರುತ್ತದೆ.

ಹೈ-ಟೆಕ್ ಪಾಲಿಟೆಕ್ನಿಕ್, ಗೌರಿಬಿದನೂರು ಈ ವಿದ್ಯಾಸಂಸ್ಥೆಯಲ್ಲಿ ಈಗ ಒಟ್ಟು 377 ವಿದ್ಯಾರ್ಥಿಗಳಿದ್ದು, ಇವರಲ್ಲಿ 99 ವಿದ್ಯಾರ್ಥಿಗಳು ರೆಗ್ಯೂಲರ್ ವಿದ್ಯಾರ್ಥಿಗಳು ಮತ್ತು 278 ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿರುವುದು ಕಂಡು ಬಂದಿರುತ್ತದೆ.

99 ರೆಗ್ಯೂಲರ್ ವಿದ್ಯಾರ್ಥಿಗಳನ್ನು ಈಗಾಗಲೇ ಎಂ.ಇ.ಎಸ್ ಪಾಲಿಟೆಕ್ನಿಕ್, ಮಧುಗಿರಿ ಮತ್ತು ಬಿ.ಜಿ.ಎಸ್ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ ಈ ವಿದ್ಯಾಸಂಸ್ಥೆಗಳಿಗೆ ವರ್ಗಾವಣೆ ಅವಕಾಶ ಕಲ್ಪಿಸಿ ವ್ಯಾಸಂಗ ಮಾಡಲು ಅನುಮತಿ ನೀಡುವ ಸಂಬಂಧ ನಿರ್ದೇಶನಾಲಯದಿಂದ ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಮೇಲ್ಕಂಡ ಎರಡೂ ಸಂಸ್ಥೆಗಳನ್ನು ಪರೀಕ್ಷಾ ಕೇಂದ್ರಗಳನ್ನಾಗಿ ಗುರುತಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಪ್ರಸ್ತುತ ರೆಗ್ಯೂಲರ್ ವಿದ್ಯಾರ್ಥಿಗಳನ್ನು ಹೊರತುಪಡಿಸಿ **ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ**, ಅವರ ಶೈಕ್ಷಣಿಕ ಹಿತದೃಷ್ಟಿಯನ್ನು ಪರಿಗಣಿಸಿ ಬಿ.ಜಿ.ಎಸ್ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ ಈ ವಿದ್ಯಾಸಂಸ್ಥೆಯಲ್ಲಿ ಏಪ್ರಿಲ್/ಮೇ 2018 ರ ಡಿಪ್ಲೊಮಾ ಸೆಮಿಸ್ಟರ್ ಪರೀಕ್ಷೆಯಿಂದ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಲಾಗಿದೆ.

ಆದಕಾರಣ ಇಂದಿನವರೆಗೆ ಪರೀಕ್ಷಾ ಶುಲ್ಕವನ್ನು ಪಾವತಿಸದೇ ಇರುವ ರೆಗ್ಯೂಲರ್ ಹಾಗೂ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಂದ **ದಿನಾಂಕ: 10.04.2018 ರವರೆಗೆ ದಂಡರಹಿತವಾಗಿ** ಪರೀಕ್ಷಾ ಶುಲ್ಕ ತೆಗೆದುಕೊಳ್ಳಲು ಮತ್ತು Candidate List ಅನ್ನು ಬಿ.ಜಿ.ಎಸ್ ಪಾಲಿಟೆಕ್ನಿಕ್ ನಲ್ಲಿನ B.T.E Linx ನಲ್ಲಿ Update ಮಾಡಲು ಪ್ರಿನ್ಸಿಪಾಲರು ಬಿ.ಜಿ.ಎಸ್ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ ಇವರಿಗೆ ಅಧಿಕಾರ ನೀಡಿ ಮುಂದಿನ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳ

ಇವರಿಗೆ: ಪ್ರಾಚಾರ್ಯರು, ಬಿ.ಜಿ.ಎಸ್ ಪಾಲಿಟೆಕ್ನಿಕ್, ಚಿಕ್ಕಬಳ್ಳಾಪುರ – ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:
1. ಪ್ರಾಚಾರ್ಯರು, ಹೈ-ಟೆಕ್ ಪಾಲಿಟೆಕ್ನಿಕ್, ಗೌರಿಬಿದನೂರು Prin. MES Poly, Madhugiri.
2. ಸಿಸ್ಟಂ ಅನಾಲಿಸ್ಟ್, ಗಣಕ ಕೇಂದ್ರ, ತಾಂತ್ರಿಕ ಪರೀಕ್ಷಾ ಮಂಡಳ, ಬೆಂಗಳೂರು
3. ಉಪನಿರ್ದೇಶಕರು, ಪರೀಕ್ಷೆ, ತಾಂತ್ರಿಕ ಪರೀಕ್ಷಾ ಮಂಡಳ, ಬೆಂಗಳೂರು
4. ಸಹಾಯಕ ನಿರ್ದೇಶಕರು, ಪರೀಕ್ಷೆ, ತಾಂತ್ರಿಕ ಪರೀಕ್ಷಾ ಮಂಡಳ, ಬೆಂಗಳೂರು
5. ಎ.ಸಿ.ಎಂ ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
6. ನಿರ್ದೇಶಕರ ಆಪ್ತ ಶಾಖೆ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು
7. ಕಾರ್ಯದರ್ಶಿಯವರ ಆಪ್ತ ಶಾಖೆ, ತಾಂತ್ರಿಕ ಪರೀಕ್ಷಾ ಮಂಡಳ, ಬೆಂಗಳೂರು